# <u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>

ಸಿ.ಸಿ. ನಂ.1/2024

ಪಿ.ಡಬ್ಯೂಃ9

ಸಿಡಬ್ಲ್ಯೂ–10

ಸಾಕ್ಷಿದಾರರ ಹೆಸರು : ಮಂಜುನಾಥ ನಾವಿ

ತಂದೆಯ ಹೆಸರು : ಗಿಡ್ಡಪ್ಪ ನಾವಿ

ವಯಸ್ಸು : 49 ವರ್ಷ

ಉದ್ಯೋಗ : ಉಪ ಅರಣ್ಯ ಸಂರಕ್ಷಣಾಧಿಕಾರಿ , ಸಾಮಾಜಿಕ ಅರಣ್ಯ ವಿಭಾಗ , ಕಾರವಾರ

ವಾಸ : ಕಾರವಾರ

ದಿನಾಂಕಃ 13–03–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು ದಿಃ06-06-2020 ರಿಂದ ದಿಃ 21-04-2022 ರ ತನಕ ಅಂಕೋಲಾ ಉಪವಿಭಾಗ ಅಂಕೋಲಾ ವಲಯದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದೇನೆ .

2. ಈ ಪ್ರಕರಣದ ಕಡತವನ್ನು ಚಾಸಾ 9 ರವರು ನನಗೆ ಹಸ್ತಾಂತರಿಸಿರುತ್ತಾರೆ . ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 16-12-2020 ರಂದು ವಾಹನ ನೊಂದಣಿ ಸಂಖ್ಯೆ ಕೆಎ-31 /ಎಮ್ 4023 ರ ವಾಹನದ ಮಾಲಿಕರು ಯಾರೆಂದು ಗುರುತಿಸುವ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಸಿರ್ಸಿ ರವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ ಸದ್ರಿ ಕೋರಿಕೆ ಪತ್ರ ಸಾಕ್ಷಿಗೆ ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿ,ರುವುದರಿಂದ ನಿಪಿ-16 ಎಂದು ಸಾಕ್ಷಿ ಸಹಿಯನ್ನು ನಿಪಿ-16 ಎ ಎಂದು ಗುರುತಿಸಲಾಯಿತು . ದಿಃ28-10-2020 ಕ್ಕೆ ಸಿ ಸಿ ಎಮ್ ಬಿ ಹೈದರಾಬಾದ ಸಂಸ್ಥೆ ಯವರು ಜಪ್ತು ಪಡಿಸಿದ ಮಾಂಸವು ಕಾಡು ಕುರಿ (ಬಾರ್ಕಿಂಗ deer ) ಎಂದು ವರದಿ ಕೊಟ್ಟಿರುತ್ತಾರೆ . ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ . ಸದ್ರಿ ವರದಿಯನ್ನು ಸಾಕ್ಷಿಗೆ ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ನಿಪಿ-17 ಎಂದು ಗುರುತಿಸಲಾಯಿತು . ನಂತರ ಸದ್ರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಆ ವಾಹನದ ಬಗ್ಗೆ B extract ಕೊಡದೆ ಇದ್ದು ಮತ್ತು ವಾಹನದ ಮಾಲಿಕರು ಯಾರೆಂದು

ತಿಳಿಸದೆ ಇರುವ ಕಾರಣ ಅವರಿಗೆ ಪುನಃ ಇನ್ನೊಂದು ಕೋರಿಕೆ ಪತ್ರ ಕಳುಹಿಸಿ ವಾಹನದ ಮಾಲಿಕರ ವರದಿಯನ್ನು ನೀಡುವಂತೆ ತಿಳಿಸಿರುತ್ತೇನೆ .

3.ದಿಃ6-3-2021 ರಂದು ಪ್ರಕರಣದ ಅರೋಪಿಗಳಾದ ಪೀಟರ ಡುಮ್ಮಿಂಗ ಪರ್ನಾಂಡಿಸ ರವರು ಹಾಗೂ ಮಹೇಶ ನಾರಾಯಣ ಶೇಟ ರವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸನ್ನು ನೀಡಿರುತ್ತೇನೆ . ದಿಃ17-3-2021 ರಂದು ನೋಟಿಸು ಜಾರಿ ಗೊಳಿಸಿದ ಈ ಇಬ್ಬರು ಅರೋಪಿಗಳು ನನ್ನ ಮುಂದೆ ಹಾಜರಾಗಿ ಸ್ವ ಖುಷಿ ಹೇಳಿಕೆ ನೀಡಿರುತ್ತಾರೆ . ಸದ್ರಿ ನೋಟಿಸನ್ನು ಸಾಕ್ಷಿಗೆ ತೋರಿಸಲಾಗಿದ್ದು ಸಾಕ್ಷಿಯು ಆ 2 ನೋಟಿಸುಗಳನ್ನು ಗುರುತಿಸಿರುವುದರಿಂದ ನಿಪಿ-18 ಮತ್ತು 19 ಎಂದು ಸಾಕ್ಷಿ ಸಹಿಯನ್ನು ನಿಪಿ-18 (ಎ) ಮತ್ತು 19 (ಎ) ಎಂದು ಗುರುತಿಸಲಾಯಿತು . ಸದ್ರಿ 2 ಮತ್ತು 3 ನೇ ಅರೋಪಿತರು ನೀಡಿರುವ 2 ಸ್ವಖುಷಿ ಹೇಳಿಕೆಗಳನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ನಿಪಿ-20 ಮತ್ತು 21 ಎಂದು ಸಾಕ್ಷಿಯ ಸಹಿಯನ್ನು ನಿಪಿ-20 (ಎ) ಮತ್ತು 21 (ಎ) ಎಂದು ಗುರುತಿಸಲಾಯಿತು. ಈ ಪ್ರಕರದ ಇನ್ನೊಬ್ಬ ಅರೋಪಿಯಾದ 4 ನೇ ಆರೋಪಿಗೆ ವಿಚಾರಣೆಗೆ ಒಳಪಡಿಸಬೇಕೆಂದು ಇರುವಾಗ 4 ನೆ ಅರೋಪಿಯು ಮೃತ ಪಟ್ಟಿದ ಬಗ್ಗೆ ನಮ್ಮ ಇಲಾಖೆಯ ಸಿಬ್ಬಂದಿ ಅವರ ಮರಣ ಪ್ರಮಾಣ ಪತ್ರ ತಂದು ಕೊಟ್ಟಿದ್ದು ಸದ್ರಿ ಮರಣ ಪ್ರಮಾಣ ಪತ್ರ ಜೆರಾಕ್ಸ ಪ್ರತಿಯನ್ನು ಈ ಪ್ರಕರಣದ ಕಡತದಲ್ಲಿ ಅಳವಡಿಸಿರುತ್ತೇನೆ . ತದನಂತರ ನನಗೆ ವರ್ಗಾವಣೆ ಯಾಗಿದ್ದು ಈ ಪ್ರರಕಣದ ಕಡತವನ್ನು ಚಾಸಾ -11 ರವರಿಗೆ ಹಸ್ತಾಂತರಿಸಿರುತ್ತೇನೆ . ನ್ಯಾಯಾಲಯದ ಮುಂದೆ ಇರುವ 2 ಮತ್ತು 3 ನೆ ಅರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ .

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಸ್ ಆರ್ ಎನ್ ವಕೀಲರಿಂದ ಃ**

4. ಸ್ವಖುಷಿ ಹೇಳಿಕೇಯನ್ನು ಯಾರು ಬರೆದದ್ದು ಮತ್ತು ಆ ಬರವಣಿಗೆ ಯಾರದ್ದು ಎಂದರೆ ಯಾರೆಂದು ನನಗೆ ನೆನಪಿಲ್ಲ . ಅದು ಅರೊಪಿತರ ಬರವಣಿಗೆ ಅಲ್ಲ ಎಂದರೆ ಸರಿ . ಸದ್ರಿ ಸ್ವಖುಷಿ ಹೇಳಿಕಗಳನ್ನು ಯಾರು ಎಷ್ಟು ಸಮಯಕ್ಕೆ ಬರೆದರು ಎಂದು ನಮೂದು ಮಾಡಿಲ್ಲ ಎಂದರೆ ಸರಿ . ಮತ್ತು ಅದನ್ನು ಎಲ್ಲಿ ಬರೆಸಿದರು ಎಂದು ಅದರ ಸಮಯವನ್ನು ಕೂಡ ನಮೂದು ಮಾಡಿಲ್ಲ ಎಂದರೆ ಸರಿ . ಇವೆಲ್ಲಾ ಸುಳ್ಳಾಗಿ ಸೃಷ್ಟಿಸಿ ಕೊಂಡಾಗ ಇಂತಹ ಲೋಪ ದೋಷಗಳು ಆಗುತ್ತದೆ ಎಂದರೆ ಸರಿಯಲ್ಲ . ಈ ಪ್ರಕರಣವನ್ನು ಸೃಷ್ಟಿ ಮಾಡಬೇಕೆಂಬ ಕಾರಣದಿಂದ

ಸದ್ರಿ ದಾಖಲಾತಿ ನೀವು ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ . ನಾನು ಅಧಿಕಾರಿಗಳು ಸಲ್ಲಿಸಿದ ಪೂರಕ ಪ್ರಕರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಸದ್ರಿ ಮಾಂಸವು ಯಾವ ಪ್ರಾಣಿಯದ್ದು ಎಂದು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸುವಾಗ ಬರೆದು ಕಳುಹಿಸಿ ಕೊಡುವಾಗ ಇದು ಯಾವ ಪ್ರಾಣಿಯ ಮಾಂಸ ಎಂದು ಹೇಳಿ ಹಿಂದಿನವರು ಬರೆದು ಕಳುಹಿಸಿರುತ್ತಾರೆ. ನೀವು ಜವಾಬ್ದಾರಿ ಅಧಿಕಾರಿಯಾಗಿರುವುದರಿಂದ ವಿಧಿವಿಜ್ಞಾನ ಇಲಾಖೆಗೆ ಸದ್ರಿ ಮಾಂಸದ ಮಾದರಿಯನ್ನು ಕಳುಹಿಸುವಾಗ ಇದು ಕಾಡು ಕುರಿಯ ಮಾಂಸ ಎಂದು ಹೇಳಿ ಬರೆಸಿ ಕಳುಹಿಸಿಸುವುದು ಸರಿಯಾ ಎಂದರೆ ಆ ರೀತಿಯಾಗಿ ಕಳುಹಿಸಬಹುದು . ನಿಮ್ಮ ಇಲಾಖೆಯಲ್ಲಿ ನಿಮಗ ಮತ್ತು ನಿಮ್ಮ ಕೈ ಕಳಗಿನ ಅಧಿಕಾರಿಗಳಿಗೆ ಒಂದು ಮಾಂಸ ನೋಡಿದ ತಕ್ಷಣವೆ ಅದು ಕಾಡು ಕುರಿಯ ಮಾಂಸ ಎಂದು ತಿರ್ಮಾನಕ್ಕೆ ಬರುವಂತಹ ವಿಶೇಷ ತರಬೇತಿ ಆಗಿರುತ್ತದೆಯಾ ಎಂದರೆ ಇಲ್ಲ . ಸಂಪೂರ್ಣ ಪ್ರಕರಣವನ್ನು ನನ್ನ ಕೈಕೆಳಗಿನ ಅಧಿಕಾರಿಗಳಿಗೆ ಸಹಾಯ ಮಾಡಲು ನಾನು ಈ ಎಲ್ಲಾ ದಾಖಲೆ ಸೃಷಿಸಿದ್ದು ಎಂದರೆ ಸರಿಯಲ್ಲ . ಅದಕ್ಕೆ ಪೂರಕವಾಗಿ ನಿರಪರಾಧಿ ಅರೋಪಿತರ ಮೇಲೆ ಈ ದಾಖಲಾತಿ ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ. ನಾನು ಹೇಳಿದಂತಹ ವಾಹನ ಸದ್ರಿ ಅರಣ್ಯ ಗುನ್ನೆಗೆ ಸಂಭಂಧಿಸಿದಂತಹ ವಾಹನ ಅಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ** .

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.